

# ಪಕೋಡಾ ಪಾಲಿಟಿಕ್ಸ್!

23ನೇ ಪುಟದಿಂದ

## ಮಾದರಿ ಪ್ರಶ್ನೆಗಳು:

★ ನೀವು ಪಿಎಂಪಿಟಿಸಿ (ಪ್ರೈಮ್ ಮಿನಿಸ್ಟರ್ ಪಕೋಡಾ ಟ್ರೈನಿಂಗ್ ಸೆಂಟರ್‌ಗೆ) ಸೇರಲಿಚ್ಛಿಸುತ್ತೀರಾ? ಹಾಗಿದ್ದರೆ ವಿವಿಧ ಪಕೋಡಾ ಟ್ರೈನಿಂಗ್ ಕೋರ್ಸ್‌ಗಳಿಗೆ ಸೇರಲು ನಿಮ್ಮ ಅರ್ಹತೆಗನುಗುಣವಾಗಿ ಟಿಕ್ ಮಾಡಿ:

1) ಬಿ.ಟೆಕ್, ಎಂ.ಟೆಕ್ –ಮೋದಿ ಪಕೋಡ
2) ಪಿಎಚ್‌ಡಿ /ಎಂಬಿಎ– ಶಾ ಪಕೋಡ
3) ಎಂಕಾಂ– ಜೇಟ್ಲಿ ಪಕೋಡ
4) ಹೋಂ ಸೈನ್ಸ್– ಕರಂದ್ಲಾಜೆ ಗರಂ ಪಕೋಡ
5) ಮಾಮೂಲಿ ಡಿಗ್ರಿ/ನಿರುದ್ಯೋಗಿ–ಯೋಗಿ ಪಕೋಡ
6) ಮಾಸ್ ಮೀಡಿಯಾ–ಸ್ಮೃತಿ ಪಕೋಡ

★ ಈ ಕೆಳಕಂಡವುಗಳಿಗೆ ಸೂಕ್ತ ಉತ್ತರ ಟಿಕ್ ಮಾಡಿ:

1) ನೀವು ಯಾವಾಗಿನಿಂದ ಪಕೋಡ ಹಾಕುತ್ತಿರುವಿರಿ?
ಅ)ಕಾಲೇಜಲ್ಲಿ ಫೇಲಾದ ಮೇಲೆ ಆ)ಮದುವೆಯಾದ ಮೇಲೆ
ಇ)ಶೇರಲ್ಲಿ ಕಾಸು ಕಳ್ಕೊಂಡ ಮೇಲೆ ಈ)ಪ್ರಧಾನಿಗಳ ಹೇಳಿಕೆ ನಂತರ

2) ನೀವು ಎಲ್ಲಿ ಪಕೋಡ ಹಾಕುತ್ತಿರುವಿರಿ?
ಅ) ಫುಟ್‌ಪಾತಿನಲ್ಲಿ ಆ) ದರ್ಶಿನಿಯಲ್ಲಿ
ಇ) ಸಂತೆಯಲ್ಲಿ ಈ) ರಾಜಕೀಯ ಸಮಾವೇಶದಲ್ಲಿ

3) ನೀವು ಪಕೋಡ ಹಾಕಲು ಪ್ರೇರಣೆ ಯಾರು?
ಅ) ಕೈ ಹಿಡಿದ ಹೆಂಡತಿ ಆ) ಕೈ ಕೊಟ್ಟ ಪ್ರೇಯಸಿ
ಇ) ಹೋಟೆಲ್ ಬಿಲ್ ಕೊಡದೆ ಸಿಕ್ಕಿಬಿದ್ದದ್ದು
ಈ) ಪಕೋಡ ಚಳುವಳಿ

4) ಪಕೋಡ ಹಾಕಲು ನೀವು ಬಯಸುವ ಹಣ ಸಹಾಯದ ಸ್ವರೂಪ ಯಾವುದು?
ಅ) ದಾನ ಆ) ಅನುದಾನ
ಇ) ನೀರವ್ ಲೋನ್ ಈ) ಮನ್ನಾ ಸಾಲ

5) ಪಕೋಡ ತಯಾರಿಕೆ ಒಂದು ಕಲೆ (ಕೈ, ಮುಖಕ್ಕೆ ಎಣ್ಣೆ ಸಿಡಿದಾಗ) ಎಂದು ಹೇಳಿರುವವರು ಯಾರು?
ಅ) ಆನಂದಿ ಬೆನ್ ಪಟೇಲ್ ಆ) ಜೆ.ಎಚ್. ಪಟೇಲ್
ಇ) ಹಾರ್ದಿಕ್ ಪಟೇಲ್ ಈ) ವಲ್ಲಭಭಾಯಿ ಪಟೇಲ್

6) ನೀವು ಪಕೋಡ ಮಾರುವ ಯಾವ ಕೆಟಗರಿಗೆ ಸೇರಿದವರು?
ಅ) ಬಿಡಿ ಪಕೋಡ
ಆ) ಹೋಲ್ ಸೇಲ್ (ತೂತೊಡೆ) ಪಕೋಡ
ಇ) ಮಿಕ್ಸ್ ಪಕೋಡ ಈ) ಹಳಸಲು ಪಕೋಡ

7) ಬಿಜೆಪಿ ಎನ್ನುವುದರ ಫುಲ್‌ಫಾರ್ಮ್ ಏನು?
ಅ) ಬ್ರಿಂಜಲ್ ಜಾಲಿ ಪಕೋಡ
ಆ) ಬ್ರಿಂಜಲ್ ಜೇಟ್ಲಿ ಪಕೋಡ
ಇ) ಬ್ರಿಂಜಲ್ ಜೋಕ್ ಪಕೋಡ
ಈ)ಬ್ರಿಂಜಲ್ ಜಾಕ್ಪಾಟ್ ಪಕೋಡ

**ಈ ಕೆಳಕಂಡ ಎಲ್ಲವನ್ನೂ ಉತ್ತರಿಸಿ:**

1)ಪಕೋಡಾದ ಒಂದು ಅಂದವಾದ ಚಿತ್ರ(ಹಾಕುವವರದ್ದು ಅಲ್ಲ)ಬರೆದು, ಅದರ ಭಾಗಗಳನ್ನು ಗುರುತಿಸಿ.

2)ಗಂಡಸರದ್ದು ಸ್ಕಿಲ್ ಪಕೋಡ, ಹೆಂಗಸರದ್ದು ಕಲ್ ಪಕೋಡಾ–– ಈ ಮಾತನ್ನು ಅನುಭವದ ಉದಾಹರಣೆಗಳ ಮೂಲಕ ಪುಷ್ಟೀಕರಿಸಿ.

3)ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ಹಿನ್ನೆಲೆಯಲ್ಲಿ ಪಕೋಡಾಕರಣವನ್ನು 100 ಶಬ್ದಗಳಲ್ಲಿ ವಿವರಿಸಿ.

4)ರಸ್ತೆ ಬದಿ ಪಕೋಡ ಮಾರಿ ಪವಾಡಸದೃಶ ಆಸ್ತಿ ಮಾಡಿರುವ ಕನಿಷ್ಠ ನಾಲ್ವರು ರಾಜಕಾರಣಿಗಳ ಉದಾಹರಣೆ ಕೊಡಿ.

4) ಸಮ್ಮಿಶ್ರ ಸರ್ಕಾರ ಎಂದರೆ ಪಕೋಡ ಎಂಬುದನ್ನು ಹೇಗೆ ಸಮರ್ಥಿಸುವಿರಿ?

6) ಪಕೋಡದಿಂದ ಪಗೋಡದವರೆಗೆ– ಎನ್ನುವ ಪುಸ್ತಕಕ್ಕೆ ಒಂದು ಮುನ್ನುಡಿ ಬರೆಯಿರಿ.

ಈ ಕೆಳಗಿನ ವಿಷಯಕ್ಕೆ ತಕ್ಕಂತೆ ಟಿಪ್ಪಣಿ/ ಅಡಿಟಿಪ್ಪಣಿ/ ಶರಾ/ ಹಿಂಬರಹ/ ವಿಮರ್ಶೆ/ ಹರಟೆ/ ತಲೆಹರಟೆ/ ಪ್ರತಿಕ್ರಿಯೆ ಬರೆಯಿರಿ ಅಥವಾ ಬಯ್ಯಿರಿ.

ಪ್ರಾಜೆಕ್ಟ್ ಪಕೋಡ, ಮಿಶನ್ ಪಕೋಡಾ, ಪಕೋಡ ಪ್ಯಾಕೇಜ್, ಪಕೋಡ ಪಾಲಿಟಿಕ್ಸ್, ಚುನಾವಣೆ ಮತ್ತು ಪಕೋಡ, ಚಿತ್ರಾನ್ನ ವರ್ಸಸ್ ಪಕೋಡಾ, ಮೈ ಎಕ್ಸ್‌ಪೆರಿಮೆಂಟ್ಸ್ ವಿದ್ ಪಕೋಡಾ, ಡಿಸ್ಕವರಿ ಆಫ್ ಪಕೋಡಾ, ಪಕೋಡಾ ಭಾಗ್ಯ,

ಈ ಕೆಳಗಿನ ಪಕೋಡಾ ಗಾದೆ/ ನಾಣ್ನುಡಿಗಳನ್ನು ಅರ್ಥಸಹಿತ ವಿವರಿಸಿ:

1) ಪಕೋಡಂ ಪುರುಷ ಲಕ್ಷಣಂ
2) ಬಾಣಲೆ ನೋಡುದ್ರೆ ಕಾಣಲ್ವಾ ಪಕೋಡದ ಹುಳುಕು
3) ಪಕೋಡ ಮೇಲೆ ಪ್ರೀತಿ, ಎಣ್ಣೆ ಮೇಲೆ ದ್ವೇಷ!
4) ಓದೋದು ಕಾಶಿ ಖಂಡ, ತಿನ್ನೋದು ಕ್ಯಾಪ್ಸಿಕಾಮ್ ಬೋಂಡ!
5) ಒಲ್ಲದ ಹೆಂಡ್ತಿಗೆ ಪಕೋಡದಲ್ಲೂ ಕಲ್ಲು!
6) ಹೆಸರಿಗೆ ಹೊನ್ನೇಗೌಡ, ತಿನ್ನಕ್ಕಿಲ್ಲ ನಾಕು ಪಕೋಡ!
7) ರಾತ್ರಿ ಮಾಡಿದ ಪಕೋಡನ ಫ್ರಿಜ್‌ನಲ್ಲಿಟ್ಟು ತಿಂದ್ರಂತೆ!
8) ಯಾರದ್ದೋ ದುಡ್ಡು, ಎಲ್ಲಮ್ಮನ ಪಕೋಡ!
9) ಪಾಪಿ ಎಲ್ ಹೋದ್ರೂ ಅರೆಬೆಂದ ಪಕೋಡ!
10) ಪಕೋಡ ತಿಂದೂ ಹೋದ, ಕಟ್ಟಿಸ್ಕೊಂಡೂ ಹೋದ.
11) ಪಕೋಡ ಮಾಡಕ್ ಹೋಗಿ ತೂತು ಒಡೆ ಮಾಡ್ದ ಹಾಗೆ!

ಸಂದರ್ಭಕ್ಕೆ ತಕ್ಕಂತೆ ಕೂಗಾಡಿ ಈ ಹೇಳಿಕೆಗಳನ್ನು ವಿವಾದ ಮಾಡಿ:

1) ಪಕೋಡ ಹಾಕುವಂತೆ ಭಿಕ್ಷಾಟನೆ ಮಾಡುವುದೂ ಉದ್ಯೋಗವೇ!

2) ಸ್ವಾಭಿಮಾನಿಗೆ ಪಕೋಡ, ಪರಾವಲಂಬಿಗೆ ವಾಷಿಂಗ್ ಸೋಡ!

3) ಪಕೋಡಕ್ಕೆ ಹೋದ ಮಾನ ನಿಂಬೆ ಸೋಡ ಕೊಟ್ರೂ ಬರಲ್ಲ.

4) ಪಕೋಡ ಪಕ್ಕಾ ವೆಜ್ ಐಟಂ, ವೆಜ್ ಪಕೋಡ ಮಾರುವುದೂ ಉದ್ಯೋಗ ಎಂಬಂತೆ ನಾನ್ ವೆಜ್, ಫಿಶ್,ಚಿಕನ್ ಪಕೋಡಗಳನ್ನೂ ಉದ್ಯೋಗ ಎಂದು ಪರಿಗಣಿಸಬೇಕು. ಇಲ್ಲದಿದ್ದರೆ ತಾರತಮ್ಯ ಸೃಷ್ಟಿಸಿದಂತಾಗುತ್ತದೆ.

5) ಪಕೋಡ ಮಾಡುವ ಹೆಂಗಸರಿಗೆ, ಗಂಡಂದಿರಿಂದ ಮಾಡಿಸುವ ಪತ್ನಿಯರಿಗೆ ಹಾಗೂ ಗ್ಯಾಸ್ ಬಳಸದೆ ಸೀಮೆಎಣ್ಣೆ ಪಕೋಡ ಮಾಡುವವರಿಗೆ ವಿಶೇಷ ಮೀಸಲಾತಿ ನೀಡಬೇಕು.

6) ಡಿಜಿಟಲ್ ಇಂಡಿಯಾ ಅಂದ್ರೆ ಸ್ಯಾಮ್ ಪಿತ್ರೋಡ, ಮೇಕಿನ್ ಇಂಡಿಯಾ ಅಂದ್ರೆ ಈರುಳ್ಳಿ ಪಕೋಡ!

7) ನರೇಗಾ ರೀತಿಯಲ್ಲಿ 'ಪಕೋಡ ಕರೇಗಾ' ಯೋಜನೆ ಮಾಡಿ ವರ್ಷಕ್ಕೆ ನೂರು ದಿನ ಖಾಯಂ ಪಕೋಡೋದ್ಯೋಗ ನೀಡಿ ಭತ್ಯೆ ಕೊಡಬಹುದೇ?

8) ಪಕೋಡಾ ಮಾರುದ್ರೆ ಪಿಎಂ ಆಗಬಹುದೆ?